

# ಯಂತ್ರ

ಮನೆಯಲ್ಲಿ ಮಗನನ್ನು ಎಲ್ಲಿಯೂ ಕಾಣದೆ ಕಂಗಾಲಾದ ತಾಯಿ, 'ಮಗಾ ಎಲ್ಲಿದ್ದೀಯೋ' ಎಂದು ಜೋರಾಗಿ ಕೂಗಿದಳು. ಆಗ ಕ್ಷೀಣ ಪ್ರತ್ಯುತ್ತರ ಬಂದುದು ಎಲ್ಲಿಂದ ಗೊತ್ತೇ?

■ ಟಿ.ಎಂ. ರಮೇಶ

ತೀವ್ರ ಬಡತನದಲ್ಲಿಯೇ ತನ್ನ ಮುದ್ದಿನ ಮಗನನ್ನ ಓದಿಸಿ ಬೆಳೆಸಿದಳು ಆ ತಾಯಿ.

ಪ್ರತಿಭಾವಂತನಾದ ಮಗ ಎಂಜಿನಿಯರ್ ಆಗಿ ಒಳ್ಳೆಯ ಕೆಲಸ ಹಿಡಿದು ಈಗ ಮನೆಯಿಂದಲೇ ಕೆಲಸ ಮಾಡುತ್ತ ಲಕ್ಷ ಲಕ್ಷ ದುಡಿಯುತ್ತಿದ್ದಾನೆ. ಅದನ್ನ ಕಂಡು ಅವನ ಪ್ರೀತಿಯ ತಾಯಿಗೆ ಹಿಡಿಸಲಾರದಷ್ಟು ಸಂತೋಷವಾದದ್ದು ಸತ್ಯ. ಆದರೆ ಊಟ ತಿಂಡಿ ಮರೆತು, ತನ್ನ ರೂಮಿನಲ್ಲಿ ಸದಾಕಾಲ ಲ್ಯಾಪ್‌ಟಾಪಿನೆದುರು ಕುಳಿತು ಹಗಲು ರಾತ್ರಿಯೆನ್ನದೆ ದುಡಿವ ಮಗನನ್ನ ಕಂಡು ಬಹಳ ದುಃಖವೂ ಸಂಕಟವೂ ಆಗುತ್ತಿತ್ತು. ಅದಕ್ಕೆ ಮಗನಿಗೆ ಹೊತ್ತು ಹೊತ್ತಿಗೆ ಊಟ ತಿಂಡಿಯನ್ನ ಅವನ ಬಳಿಯಲ್ಲಿಯೇ ಇಟ್ಟು ಅವನ ತಲೆ ಸವರಿ ಬರುತ್ತಿದ್ದಳು. ಒಮ್ಮೊಮ್ಮೆ ಆತ ತಿನ್ನದೆ ಹಾಗೇ ಬಿಟ್ಟಿದ್ದನ್ನ ಚೆಲ್ಲಿ ಫ್ರೆಶ್ ಆಗಿ ಮಾಡಿ ತೆಗೆದುಕೊಂಡು ಹೋಗಿ ಕೊಟ್ಟು 'ಊಟ ಮಾಡೋ ಕಂದಾ' ಅಂತ ಪ್ರೀತಿಯಿಂದ ಬೈಯುತ್ತಿದ್ದಳು. ಅದಕ್ಕಾತ ಚಪ್ಪೆ ನಗು ನಗುತ್ತಿದ್ದ.

ಹೀಗಿರುವಾಗ ಒಂದು ದಿನ ಆಕೆ ಮಧ್ಯಾಹ್ನದ ಊಟ ತಗೊಂಡು ಮಗನ ಕೋಣೆಗೆ ಹೋದಾಗ ಆತ ತನ್ನ ಜಾಗದಲ್ಲಿಯೇ ಇರಲಿಲ್ಲ. ರೂಮಿಗೆ ಸೇರಿಕೊಂಡೇ ಇದ್ದ ಶೌಚಾಲಯಕ್ಕೆ/ಸ್ನಾನದ ಮನೆಗೆ ಹೋಗಿರಬಹುದು ಅಂದ್ಕೊಂಡು ಮರಳಿದಳು. ಸಂಜೆ ಟೀ ಕೊಟ್ಟು ಬರುವ ಅಂತ ಹೋದರೆ ಆಗಲೂ ಅವನಿರಲಿಲ್ಲ. ಅವಳಿಗೆ ತುಂಬಾ ಕಳವಳವಾಯಿತು.

ಸ್ನಾನದ ಮನೆ ಬಾಗಿಲು ದೂಡಿದರೆ ತೆರೆದುಕೊಂಡಿತು. ನಡುಮನೆಗೆ ಬಂದು ನೋಡಿದರೆ ಹಾಕಿದ ಬಾಗಿಲು ತೆರೆದೇ ಇಲ್ಲ. ವರ್ಕ್ ಫ್ರಂ ಹೋಂ ಶುರುವಾದ ಬಳಿಕ ಆತ ಹೊರಹೋಗುವುದು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪವಾಗಿತ್ತು. ಏನು ಬೇಕಾದರೂ ಆನ್‌ಲೈನಿನಲ್ಲಿ ತರಿಸುವುದೇಯ! ಹಾಗಾದರಿವನು ಎಲ್ಲಿ ಹೋದ?

ಎಲ್ಲ ರೂಮು ಹೊಕ್ಕು ಕರೆದಳು; ಗೇಟಿನವರೆಗೆ ಹೋಗಿ ಕರೆದಳು. ಹಿತ್ತಲಲ್ಲಿ, ಹೂಕುಂಡದ ಸಂದಿಗೊಂದಿಯಲ್ಲಿ ಹುಡುಕಿ ಕರೆದಳು. ರಸ್ತೆಗೆ ಹೋಗಿ ಉದ್ದಾನುದ್ದ ದಿಟ್ಟಿಸಿದಳು. ಕ್ಷಣಕ್ಷಣಕ್ಕೂ ಕಳವಳ ಹೆಚ್ಚಾಯಿತು. ದುಃಖ ಉಮ್ಮಳಿಸಿ ಬಂತು.

ಮತ್ತವನ ರೂಮಿಗೆ ಬಂದಳು. ಏನಾದರೂ ಪತ್ರಗಿತ್ರ ಬರೆದಿಟ್ಟಿದ್ದಾನೋ ಅಂತ ಹುಡುಕಿದಳು. ಲ್ಯಾಪ್‌ಟಾಪ್ ಆನ್ ಆಗಿಯೇ ಇತ್ತು. ಎಲ್ಲಾದರೂ ಹೋಗುವುದಿದ್ದರೆ ಆಫ್ ಮಾಡುತ್ತಿದ್ದ. ಅಂದರೆ ಎಲ್ಲೂ ಹೋಗಿಲ್ಲವೆ?

'ಮಗಾ ಎಲ್ಲಿದ್ದೀಯೋ' ಅಂತ ಕಂಗೆಟ್ಟು ಕೂಗಿದಳು.

'ಅಮ್ಮ, ಲ್ಯಾಪ್‌ಟಾಪ್ ಅನ್ನು ಸ್ವಲ್ಪ ಚಾರ್ಜಿಗೆ ಹಾಕ್ತೀಯ ಪ್ಲೀಸ್, ಇನ್ನು ನಂಗೆ ಊಟ ತಿಂಡಿ ಬದ್ಲು ಚಾರ್ಜಿಗೊಂದು ಹಾಕ್ತಾ ಇರಮ್ಮ ಸಾಕು' ಅನ್ನುವ ಕ್ಷೀಣ ದನಿ ಲ್ಯಾಪ್‌ಟಾಪಿಂದ ಬಂತು.

ಪ್ರತಿಕ್ರಿಯಿಸಿ: feedback@sudha.co.in